

## ಡೇಟಿಂಗ್‌ಗೂ ಕರಾರು!



ಸುನಿಲ್ ಶೆಟ್ಟಿ ಮತ್ತು ಮನಾ ಶೆಟ್ಟಿ ಮಗಳು ಅತಿಯಾ ಶೆಟ್ಟಿ ಬೆಳ್ಳಿ ಪರದೆಯಲ್ಲಿ ಕಾಣಿಸಿಕೊಳ್ಳುವ ದಿನಗಳು ಹತ್ತಿರವಾಗುತ್ತಿವೆ. ಅತಿಯಾಳ ಮೊದಲ ಸಿನಿಮಾ ಎಂಬ ಕಾರಣಕ್ಕೆ ಮಾತ್ರ 'ಹೀರೊ' ಗಮನ ಸೆಳೆದಿಲ್ಲ. ಜಿಯಾ ಖಾನ್ ಆತ್ಮಹತ್ಯೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಸೂರಜ್ ಪಾಂಚೋಲಿ ಈ ಚಿತ್ರದಲ್ಲಿ ಅತಿಯಾಗೆ ಜೋಡಿ. 1983ರಲ್ಲಿ ಜಾಕಿ ಶ್ರಾಫ್ ನಟಿಸಿದ್ದ 'ಹೀರೊ' ಚಿತ್ರದ ಮರುಸೃಷ್ಟಿ ಈ ಸಿನಿಮಾ.

ಸಾಮಾನ್ಯವಾಗಿ ಹೊಸ ಜೋಡಿಯೊಂದು ಚಿತ್ರರಂಗಕ್ಕೆ ಪರಿಚಯವಾಗುತ್ತಿದೆ ಎಂದಾಕ್ಷಣ ಅದರ ಬೆನ್ನಲ್ಲೇ ಇಬ್ಬರ ನಡುವೆ ಏನೋ ಇದೆ ಎಂಬ ಗುಲ್ಲೂ ಹರಡುತ್ತದೆ. ಮೊದಲ ಸಿನಿಮಾದ ಮೊದಲ ನಾಯಕ– ನಾಯಕಿ ಮಧ್ಯೆ ಆತ್ಮೀಯತೆ ಬೆಳೆಯುವುದು ಸಹಜ. ಚಿತ್ರೀಕರಣದ ವೇಳೆ ಇಬ್ಬರೂ ಡೇಟಿಂಗ್ ಮಾಡಲು ಶುರು ಮಾಡಿದರೆ ಸಿನಿಮಾಕ್ಕೂ ತೊಂದರೆ. ಈ ಕಾರಣಕ್ಕೆ ಚಿತ್ರತಂಡ ಇಬ್ಬರಿಂದ 'ನೋ ಡೇಟಿಂಗ್' ಕರಾರಿಗೆ ಸಹಿ ಹಾಕಿಸಿಕೊಂಡಿದೆಯಂತೆ.

ಚಿತ್ರೀಕರಣ ಮತ್ತು ಚಿತ್ರದ ಪ್ರಚಾರದ ಸಂದರ್ಭದಲ್ಲಿ ಇಬ್ಬರೂ ಒಟ್ಟಿಗೆ ಊಟ ಅಥವಾ ಕಾಫಿಗೆಂದು ಹೊರಗೆ ಹೋಗುವಂತಿಲ್ಲ ಎಂಬ ಷರತ್ತನ್ನು ವಿಧಿಸಲಾಗಿತ್ತು. ಇದಕ್ಕೆ ಕಾರಣವೂ ಇದೆ. ಸೂರಜ್ ಮತ್ತು ಅತಿಯಾ ಇಬ್ಬರದೂ ಚಿಕ್ಕ ವಯಸ್ಸು. ಡೇಟಿಂಗ್ ನಡೆಸಲು ಇಬ್ಬರೂ ಪ್ರಾಪ್ತರಾಗಿಲ್ಲ ಎನ್ನುವುದು ಇಬ್ಬರ ಪೋಷಕರ ಅಭಿಪ್ರಾಯ. ಸುನಿಲ್ ಶೆಟ್ಟಿ, ಇನ್ನೂ ಚಿತ್ರರಂಗಕ್ಕೆ ಅಡಿಯಿಡುತ್ತಿರುವ ತಮ್ಮ ಮಗಳ ಕುರಿತು ಗಾಸಿಪ್‌ಗಳಿಗೆ ಅವಕಾಶ ನೀಡಬಾರದು ಎಂಬ ಎಚ್ಚರಿಕೆಯ ತೀರ್ಮಾನ ತೆಗೆದುಕೊಂಡು ಅದಕ್ಕೆ ಬದ್ಧವಾಗಿರುವಂತೆ ಅತಿಯಾಗೆ ಸೂಚಿಸಿದ್ದರಂತೆ. ವಿವಾದದಲ್ಲಿ ಸಿಲುಕಿದ್ದ ಸೂರಜ್ ಪಾಂಚೋಲಿಯ ಕುಟುಂಬ ಸಹ ಇಂತಹ ಹೊಸ ಸಮಸ್ಯೆಗಳು ಬೇಡ ಎಂದು ಸೂಚನೆ ನೀಡಿತ್ತು. 'ನೋ ಡೇಟಿಂಗ್' ಕರಾರಿಗೆ ಒಪ್ಪಿಗೆ ಸೂಚಿಸಿದ ಇಬ್ಬರೂ ಅದಕ್ಕೆ ಅನುಗುಣವಾಗಿಯೇ ನಡೆದು ಕೊಂಡಿದ್ದಾರಂತೆ. 'ಹೀರೊ' ಸಲ್ಮಾನ್ ಖಾನ್ ಬ್ಯಾನರ್‌ನಲ್ಲಿ ಸಿದ್ಧವಾಗುತ್ತಿದೆ ಈ ಚಿತ್ರ. ಈ ಚಿತ್ರದ ಶೀರ್ಷಿಕೆ ಗೀತೆಗೆ ಸಲ್ಲು ದನಿ ನೀಡಿದ್ದಾನೆ. ಸೆ.11ರಂದು ಈ ಚಿತ್ರ ತೆರೆ ಕಾಣುವುದು ಬಹುತೇಕ ಖಚಿತ.

## ಫ್ಯಾಷನ್ ಒಲ್ಲದ ಅದಿತಿ

ಸಿನಿಮಾಕ್ಕೆ ಬಂದ ನಟಿಯರು ಫ್ಯಾಷನ್ ಲೋಕಕ್ಕೆ ಬಾರದಿರುವರೇ. ಅದರಲ್ಲಿಯೂ ಹೊಸ ಬಗೆಯ ಉಡುಪು, ಕೇಶ ವಿನ್ಯಾಸದ ಟ್ರೆಂಡ್ ಬೆನ್ನತ್ತುವವರು, ಸೃಷ್ಟಿಸುವವರು ಈ ನಟಿಯರು. ಆದರೆ ಇದಕ್ಕೆ ಅಪವಾದ ಅದಿತಿ ರಾವ್ ಹೈದರಿ. ಫ್ಯಾಷನ್‌ಗೂ ತನಗೂ ಅಷ್ಟಕಷ್ಟೇ ಅನುಬಂಧ ಎನ್ನುತ್ತಾಳೆ ಈ ನಟಿ.

'ಫ್ಯಾಷನ್ ಎಂದರೆ ಹೇಗೆ, ಹೀಗೆಯೇ ಇರಬೇಕು, ಹಾಗಿರಬಾರದು ಎನ್ನುವುದೆಲ್ಲಾ ನನಗೆ ತಿಳಿದಿಲ್ಲ. ನನಗೆ ಯಾವುದು ಇಷ್ಟವೆನಿಸುತ್ತದೆಯೋ ಆ ಉಡುಪು ಧರಿಸುತ್ತೇನಷ್ಟೇ. ಈ ಟ್ರೆಂಡ್‌ಗಳ ಮೇಲೆ ನನಗೆ ಕಿಂಚಿತ್ತೂ ನಂಬಿಕೆ ಇಲ್ಲ. ಫ್ಯಾಷನ್ ಎನ್ನುವುದು ನನ್ನ ಪಾಲಿಗೆ ಶಾಶ್ವತ, ಅದು ಬದಲಾಗದು' ಎಂದಿದ್ದಾಳೆ ಅದಿತಿ.

ಬಗೆ ಬಗೆಯ ಉಡುಪುಗಳ ಪ್ರೀತಿ ಇದ್ದೇ ಇದೆ. ಆದರೆ ಅದಕ್ಕೆ ಅಲಂಕಾರದ ವಸ್ತುಗಳ ಭಾರ ಹೊತ್ತುಕೊಳ್ಳುವುದು ತನಗೆ ಸಹಿಸಲಾಗದು ಎನ್ನುತ್ತಾಳೆ ಆಕೆ.

ತೆಲುಗು ಮೂಲದ ಈ ನಟಿ, ಉತ್ತಮ ನಿರ್ದೇಶಕರು ಮತ್ತು ಉತ್ತಮ ಜನರೊಂದಿಗೆ ನಟಿಸುವ ಬಯಕೆ ವ್ಯಕ್ತಪಡಿಸುತ್ತಾಳೆ. 'ನಿಮ್ಮೊಂದಿಗೆ ಕೆಲಸ ಮಾಡಬೇಕು' ಎಂದು ನಿರ್ದೇಶಕರನ್ನು ಕೇಳುವ ಆಯ್ಕೆಯ ಮಟ್ಟಕ್ಕೆ ತಾನು ತಲುಪಿಲ್ಲ. 'ನಾನು ನಿಮಗಾಗಿ ಒಂದು ಸಿನಿಮಾ ಮಾಡುತ್ತೇನೆ' ಎನ್ನುವ ಸಿನಿಮಾ ಮಂದಿಯೂ ಸಿಗಲಾರರು. ತನ್ನಂತಹ ಹೊರಗಿನ ಜನರಿಗೆ ಅದು ಸಾಧ್ಯವೂ ಆಗಲಾರದು ಎಂದಿದ್ದಾಳೆ ಅದಿತಿ. ಆಕೆಯ ಮಾತು ದಕ್ಷಿಣದ ನಟಿಯರನ್ನು ಬಾಲಿವುಡ್ ಹೇಗೆ ನಡೆಸಿಕೊಳ್ಳುತ್ತದೆ ಎಂಬುದುರ ಗೂಢಾರ್ಥವನ್ನೂ ಒಳಗೊಂಡಿದೆ.

ರಾಕೇಶ್ ಓಂಪ್ರಕಾಶ್ ಮೆಹ್ರಾ ಅವರ 'ಡೆಲ್ಲಿ 6' ಮೂಲಕ ಪೋಷಕ ಪಾತ್ರದಲ್ಲಿ ಬಾಲಿವುಡ್‌ಗೆ ಕಾಲಿಟ್ಟ ಅದಿತಿ, 'ಲಂಡನ್ ಪ್ಯಾರಿಸ್ ನ್ಯೂಯಾರ್ಕ್', 'ಬಾಸ್', 'ಯೇ ಸಾಲಿ ಜಿಂದಗಿ ಮತ್ತು 'ರಾಕ್‌ಸ್ಟಾರ್' ಚಿತ್ರಗಳಲ್ಲಿ ನಟಿಸಿದ್ದಾಳೆ. ಆದರೆ ಪ್ರತ್ಯೇಕವಾಗಿ ಗುರುತಿಸಿಕೊಳ್ಳುವಂತಹ ಅವಕಾಶ ಆಕೆಗಿನ್ನೂ ದೊರೆತಿಲ್ಲ. ಸದ್ಯ ಅದಿತಿ, ಫರ್ಹಾನ್ ಅಖ್ತರ್ ಮತ್ತು ಅಮಿತಾಭ್ ಬಚ್ಚನ್ ಜತೆ 'ವಾಜಿರ್' ಚಿತ್ರದಲ್ಲಿ ನಟಿಸುತ್ತಿದ್ದಾಳೆ.

■ ಅಮಿ

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65